# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

[ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ]

ದೂರವಾಣಿ: 0821-2340292
Email: aeerknagara@cescmysore.org

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ,
ಮೈಸೂರು.

ಸಂಖ್ಯೆ:-ಸಕಾನಿಇಂ/ಸ.ಇಂ(ತಾಂ)/ಆರ್‌ಕೆನ/ಉವಿ/2019-20/1078-79 ದಿನಾಂಕ:- 12-11-19

## ಸಭಾ ನಡಾವಳಿ

ರಾಮಕೃಷ್ಣ ನಗರ ಉಪ ವಿಭಾಗದಲ್ಲಿ, ಶ್ರೀಯುತ ಲಕ್ಷ್ಮೀಶ ಕೆ.ಕೆ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ), ಕಾ ಮತ್ತು ಪಾ ವಿವಿ ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 07.11.2019 ರಂದು ಬೆಳಿಗ್ಗೆ 11:00 ಗಂಟೆಗೆ ಜನ ಸಂಪರ್ಕ ಸಭೆಯಲ್ಲಿ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದು ಕೊರತೆಗಳ ಕುರಿತ ಅನುಪಾಲನಾ ವರದಿ.

78

**ಹಾಜರಿದ್ದ ಅಧಿಕಾರಿ/ನೌಕರರು:-**

1. ಶ್ರೀಯುತ, ಲಕ್ಷ್ಮೀಶ ಕೆ.ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿವಿ ಮೊಹಲ್ಲಾ ವಿಭಾಗ, ಚಾವಿಸನಿನಿ ಮೈಸೂರು.
2. ಶ್ರೀಮತಿ ದಿವ್ಯ ಸಿ ಎನ್, ಸಹಾಯಕ ಇಂಜಿನಿಯರ್(ತಾ), ರಾಮಕೃಷ್ಣನಗರ
3. ಶ್ರೀಯುತ ರಾಘವೇಂದ್ರ, ಸಹಾಯಕ ಇಂಜಿನಿಯರ್(ವಿ), ವಿವೇಕಾನಂದ ಶಾಖೆ.
4. ಶ್ರೀಯುತ ಮಹದೇವು, ಕಿರಿಯ ಇಂಜಿನಿಯರ್(ವಿ), ವಿವೇಕಾನಂದ ಶಾಖೆ
5. ಶ್ರೀಯುತ ರವಿಕುಮಾರ್ ಕಿರಿಯ ಇಂಜಿನಿಯರ್(ವಿ), ಹಾರೋಹಳ್ಳಿ ಶಾಖೆ.
6. ಶ್ರೀಮತಿ ಪ್ರೇಮ ಹಿರಿಯ ಸಹಾಯಕಿ, ಕಂದಾಯ ಶಾಖೆ, ರಾಮಕೃಷ್ಣನಗರ.

**ಹಾಜರಿದ್ದ ಗ್ರಾಹಕರು:-**

1. ಶ್ರೀ ಅರುಣ್ ಕುಮಾರ್ ಶೆಟ್ಟರ್, ಎಸ್.ಬಿ.ಎಮ್ ಕಾಲೋನಿ ಶ್ರೀರಾಂಪುರ ಮೈಸೂರು
2. ಶ್ರೀ ಕೆ.ವಿ ರಾಮನಾಥ್, ಎಸ್.ಬಿ.ಎಮ್ ಕಾಲೋನಿ ಶ್ರೀರಾಂಪುರ ಮೈಸೂರು
3. ಶ್ರೀ ಅಶ್ವಥ್ ನಾರಾಯಣ, ಸಲಹೆಗಾರರು

**ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡತಿರುತ್ತವೆ.**

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| 1. | ಶ್ರೀ ಅರುಣ್ ಕುಮಾರ್ ಶೆಟ್ಟರ್ 9901221999 | • ಮೊದಲನೆಯದಾಗಿ ರಾಮಕೃಷ್ಣ ನಗರ ಉಪ ವಿಭಾಗದ ಸಿಬ್ಬಂದಿಗಳಿಂದ ಗ್ರಾಹಕರಿಗೆ ಉತ್ತಮ ರೀತಿಯ ವಿದ್ಯುತ್ ಸರಬರಾಜು ನೀಡುತ್ತಿರುವುದಕ್ಕೆ ಪ್ರಶಂಸೆ ವ್ಯಕ್ತಪಡಿಸಿದರು. ನಂತರ ದಿನವಿಡಿ ವಿದ್ಯುತ್ ಸರಬರಾಜು ವ್ಯತ್ಯಯ ಗೊಂಡಾಗ ಗ್ರಾಹಕರಿಗೆ ದೂರವಾಣಿ ಸಂದೇಶ ಬರುತ್ತಿದ್ದು, ಕೆಲವೊಮ್ಮೆ ಒಂದು ಅಥವಾ ಎರಡು ತಾಸು ವಿದ್ಯುತ್ | • ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ) ರವರು ದಿನವಿಡಿ ವಿದ್ಯುತ್ ವ್ಯತ್ಯಯವಾಗುವುದು ಮೊದಲೆ ನಮ್ಮ ಗಮನಕ್ಕೆ ಬರುವುದರಿಂದ ವಿಷಯವನ್ನು ಪತ್ರಿಕಾ ಪ್ರಕಟಣೆ ನೀಡಲಾಗಿರುತ್ತದೆ. ಆದರೆ ಕೆಲವೊಮ್ಮೆ ತುರ್ತು ಕಾರ್ಯನಿರ್ವಾಹಣೆ ಹಾಗೂ 11ಕೆವಿ ವಿದ್ಯುತ್ ಮಾರ್ಗದ ತೊಂದರೆ ಇಂದಾಗಿ ವಿದ್ಯುತ್ ವ್ಯತ್ಯಯ ಆದರೆ ಇದರ ಬಗ್ಗೆ |

6583
12 NOV 2019

Scanned by CamScanner

| | | | |
|---|---|---|---|
| | | ವ್ಯತ್ಯಯಗೊಂಡಾಗ ಇದರ ಬಗ್ಗೆ ಗ್ರಾಹಕರಿಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದು ತಿಳಿಸಿದರು.<br>• ವಿದ್ಯುತ್ ಮಾರ್ಗದ ನಿರ್ವಹಣ ಕಾರ್ಯ ಮಾಡಲು ಬರುವ ಕೆಲವು ಸಿಬ್ಬಂಧಿಗಳು ಜಂಗಲ್ ಕಟ್ಟಿಂಗ್ ಮಾಡುವ ಸಂಧರ್ಭದಲ್ಲಿ ಮರದಕೊಂಬೆಗಳನ್ನು ನಿಂತಿರುವ ವಾಹನಗಳಿಗೆ ತೊಂದರೆಯಾಗದ ರೀತಿ ಕತ್ತರಿಸುವಂತೆ ತಾವು ತಿಳಿಸಿದಾಗ ಬಹಳ ಉದ್ದಟತನದಿಂದ ವರ್ತಿಸಿರುವುದಾಗಿ ತಿಳಿಸಿದರು | ಗ್ರಾಹಕರಿಗೆ ಮಾಹಿತಿ ಒದಗಿಸಲು ಸಾಧ್ಯವಾಗುವುದಿಲ್ಲ ಎಂದು ತಿಳಿಸಿದರು.<br>• ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ) ರವರು ಅಂತಹ ಸಂಧರ್ಭದಲ್ಲಿ ಸಹಾಯಕ ಇಂಜಿನೀಯರ್(ವಿ). ರವರ ಗಮನಕ್ಕೆ ತರುವಂತೆ ಹಾಗು ಅಂತಹ ಸಿಬ್ಬಂಧಿ ವರ್ಗದವರ ಮೇಲೆ ಕ್ರಮ ತೆಗೆದುಕೊಳ್ಳುವಂತೆ ಸಹಾಯಕ ಇಂಜಿನೀಯರ್(ವಿ). ಸೂಚಿಸಿದರು. |
| ೨. | ಶ್ರೀ ಕೆ.ವಿ ರಾಮನಾಥ್ 9448979349 | • ಶ್ರೀರಾಂಪುರ ೨ನೇ ಹಂತ ಪೋಸ್ಟ ಆಫೀಸ್ ರಸ್ತೆಯಲ್ಲಿ ಎಲ್.ಟಿ ವಿದ್ಯುತ್ ಕಂಬ ಬಾಗಿದ್ದು ಇದನ್ನು ಸರಿಪಡಿಸುವಂತೆ ತಿಳಿಸಿದರು.<br>• ವಿವೇಕಾನಂದ ವೃತ್ತದ ಬಳಿ ಇರುವ ಕೆನರಾ ಬ್ಯಾಂಕ್ ಎದರು ಫುಟ್‌ಪಾತ್ ಮೇಲೆ ಕೆಲವು ಮಳಿಗೆಗಳು ಅಕ್ರಮವಾಗಿ ಕಟ್ಟಿದ್ದು ಇಂತಹ ಮಳಿಗೆಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಬಾರದೆಂದು ತಿಳಿಸಿದರು. | • ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ) ರವರು ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಸಹಾಯಕ ಇಂಜಿನೀಯರ್(ವಿ). ವಿವೇಕಾನಂದ ಶಾಖೆ ರವರಿಗೆ ಸೂಚಿಸಿದರು.<br>• ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ) ರವರು ಸ್ಥಳ ಪರಿಶೀಲಿಸುವಂತೆ ಸಹಾಯಕ ಇಂಜಿನೀಯರ್(ವಿ). ವಿವೇಕಾನಂದ ಶಾಖೆ ರವರಿಗೆ ಸೂಚಿಸಿದರು. |
| ೩. | ಶ್ರೀ ಅಶ್ವತ್ ನಾರಾಯಣ 9449833792 | • ರಾಮಕೃಷ್ಣ ನಗರ ಉಪ ವಿಭಾಗದ ಎಲ್ಲಾ ಶಾಖೆಯ ಸಿಬ್ಬಂಧಿಗಳು, ತಾಂತ್ರಿಕ ಹಾಗು ಕಂದಾಯ ಶಾಖೆಯ ಸಿಬ್ಬಂದಿಗಳು ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸುತ್ತಿದ್ದು, ಉಪವಿಭಾಗದಲ್ಲಿ ಯಾವುದೇ ತೊಂದರೆ ಇರುವುದಿಲ್ಲ ಎಂದು ಸಂತೋಷ ವ್ಯಕ್ತಪಡಿಸಿದರು. | • ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ಕ) ರವರು ಪ್ರಶಂಸೆ ವ್ಯಕ್ತಪಡಿಸಿ, ಮುಂದೇನೂ ಇದೇ ರೀತಿ ಕೆಲಸ ನಿರ್ವಹಿಸುವಂತೆ ಸೂಚಿಸಿದರು. |

ಅಂತಿಮವಾಗಿ ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ಗ್ರಾಹಕರಿಗೆ ವಂದಿಸುತ್ತಾ ಅಪರಾಹ್ನ ೦೬:೦೦ ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ.
ಮೈಸೂರು.

ಪ್ರತಿಯನ್ನು:-

1. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ನಗರ ಕಾಮಗಾರಿ ವೃತ್ತ, ಚಾವಿಸನಿನಿ ರವರ ದಯಾಪರ ಮಾಹಿತಿಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.
3. ಮುಕ

Scanned by CamScanner